ಓಎಸ್ 293/2022

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 18.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದ**

ನನ್ನ ತಾಯಿಯ ತಾತ ಕಾಳಯ್ಯ ಮತ್ತು ದೊಡ್ಡಮ್ಮ ರವರಿಗೆ ಗೋಪಾಲಯ್ಯ ಮತ್ತು ಸಿದ್ದಯ್ಯ ಎಂಬ ಇಬ್ಬರೂ ಮಕ್ಕಳಿದ್ದರು ಎಂದರೆ ಸರಿ. ಸದರಿ ಗೋಪಾಲಯ್ಯ ರವರ ಹೆಂಡತಿ ವೆಂಕಟಮ್ಮ ಎಂದರೆ ಸರಿ. ಸದರಿ ಸಿದ್ದಯ್ಯ ರವರ ಹೆಂಡತಿ ಚೆನ್ನಮ್ಮ ಎಂದರೆ ಸರಿ. ಸದರಿ ಗೋಪಾಲಯ್ಯ ರವರಿಗೆ ನನ್ನ ತಾಯಿ ಗೋಪಮ್ಮ ಮತ್ತು ಕಾಳಯ್ಯ ಎಂಬ ಇಬ್ಬರೂ ಮಕ್ಕಳು ಎಂದರೆ ಸರಿ. ಗೋಪಮ್ಮ ರವರಿಗೆ ನಾನು, 1 ಮತ್ತು 3ನೇ ಪ್ರತಿವಾದಿಗಳು ಹಾಗೂ ಮೃತ ದೊಡ್ಡಮ್ಮ ಮಕ್ಕಳು ಎಂದರೆ ಸರಿ. ನನ್ನ ತಂಗಿ ಮೃತ ದೊಡ್ಡಮ್ಮ ರವರ ಗಂಡ ಸುಬ್ರಹ್ಮಣ್ಯ ಮತ್ತು ಅವರ ಮಗ ಮಲ್ಲೇಶ ಎಂದರೆ ಸರಿ. ಸದರಿ ಸಿದ್ದಯ್ಯ ರವರಿಗೆ ಸಿದ್ದಮ್ಮ ಮತ್ತು ಗೋಪಾಲಯ್ಯ ಎಂಬ ಇಬ್ಬರೂ ಮಕ್ಕಳು ಎಂದರೆ ಸರಿ. ಸದರಿ ಸಿದ್ದಮ್ಮ ರವರಿಗೆ 4ನೇ ಪ್ರತಿವಾದಿ ಚೆಲುವಯ್ಯ ಗಂಡ ಮತ್ತು 5 ರಿಂದ 8ನೇ ಪ್ರತಿವಾದಿಗಳು ಮಕ್ಕಳು ಎಂದರೆ ಸರಿ.

2. ದಾವ ಐಟಂ ನಂಃ 1ನೇ ಸ್ವತ್ತು ನನ್ನ ತಾತ ಗೋಪಾಲಯ್ಯನ ತಮ್ಮ ಸಿದ್ದಯ್ಯ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವ ಆಸ್ತಿಗಳು ನನ್ನ ತಾತ ಗೋಪಾಲಯ್ಯ ಮತ್ತು ಸಿದ್ದಯ್ಯ ರವರ ಕುಟುಂಬದ ಒಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಸದರಿ ಗೋಪಾಲಯ್ಯ ಮತ್ತು ಸಿದ್ದಯ್ಯ ರವರ ಕುಟುಂಬಸ್ಥರಿಗೆ ದಾವ ಆಸ್ತಿಯನ್ನು ವಿಭಾಗ ಮಾಡಿದರೆ ನನ್ನ ಏನು ಅಭ್ಯಂತರ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ